ಯಲ್ಲಿ ಮುನ್ಸೀಫ್ ಅಥವಾ ಜೆ.ಎಂ.ಎಫ್.ಸಿ. ಕೋರ್ಟ್ ಸ್ಥಾಪನೆ ಮಾಡುವುದರ ಬಗ್ಗೆ ಒಪ್ಪಿಗೆ ಇಲ್ಲವೆಂದು ಬರೆದಿದ್ದಾರೆ. ಆದರೂ ಈ ವಿಷಯವನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರುವುದರಿಂದ ಪುನಃ ಇದರ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ಬರೆಯುತ್ತೇವೆ. ಪುನಃ ಅನುಮತಿ ಕೊಡಬೇಕೆಂದು ಶಿಫಾರಸು ಮಾಡುತ್ತೇವೆ. ಆದರೆ ತಮ್ಮ ಮಾಹಿತಿ ಸರಿಯಿಲ್ಲ.

## ಲೋಕೋಪಯೋಗಿ ಇಲಾಖೆಯವರಿಂದ ಕಾಮಗಾರಿ ನಿರ್ವಹಣೆ

೫೫೩ (೧೬೬೫) ಶ್ರೀ ಕೆ. ಕುಶಾಲ(ಸುಳ್ಯ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬರುವ ಮೊದಲು ಮತ್ತು ನಂತರ ಕಾಮಗಾರಿಗಳ ಅಂದಾಜು ಮೌಲ್ಯ ರೂ. ೫ ಲಕ್ಷಕ್ಕೆ ಮೀರಿದರೆ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರೇ ಪೂರೈಸುವರೆ?

ಆ) ಪೂರೈಸದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಜಿ ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ರೂ. ೫ ಲಕ್ಷಕ್ಕೆ ಮೀರಿದ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯು ಪೂರೈಸುವ ಪ್ರಸ್ತಾವನೆಯು ಇರುವುದಿಲ್ಲ.

ಆ) ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ನಂತರ ಲೋಕೋಪಯೋಗಿ ಇಲಾಖೆಯಲ್ಲಿದ್ದ ಇತರ ಜಿಲ್ಲಾ ರಸ್ತೆಗಳು, ಹಳ್ಳಿ ರಸ್ತೆಗಳು, ಕನಿಷ್ಠ ಅವಶ್ಯಕತೆ ಯೋಜನೆಯಲ್ಲಿ ಬರುವ ಕಾಮಗಾರಿಗಳು, ಪ್ರಾಥಮಿಕ ಹಾಗೂ ಸೆಕೆಂಡರಿ ಶಾಲಾ ಕಟ್ಟಡಗಳು, ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಗಳು ಇತ್ಯಾದಿ ಇವುಗಳನ್ನು ಆಸ್ತಿ ಮತ್ತು ಚರಣಗಳ ಸಹಿತ ಜಿಲ್ಲಾ ಪರಿಷತ್ತಿನವರೇ ನಿರ್ವಹಿಸುವಂತೆ ಸರ್ಕಾರದ ಆದೇಶವಿರುವುದರಿಂದ ಹಾಗೂ ಜಿಲ್ಲಾ ಪರಿಷತ್ತು ಸ್ವಾಯತ್ತ ಸಂಸ್ಥೆ ಆಗಿರುವುದರಿಂದ. ಲೋಕೋಪಯೋಗಿ ಇಲಾಖೆಯು ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬರುವುದಿಲ್ಲ.

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ೧೯೭೭ನೇ ಇಸವಿಯಲ್ಲಿ ನನ್ನ ಕ್ಷೇತ್ರದಲ್ಲಿ ಸೇತುವೆ ಮತ್ತು ಒಂದು ಕಾಮಗಾರಿಗೆ ತಲಾ ೨೦ ಲಕ್ಷ ರೂಪಾಯಿಗಳನ್ನು ಸರ್ಕಾರ ಮಂಜೂರು ಮಾಡಿತ್ತು. ೧೯೮೪–೮೫ ರಿಂದ ೧೯೮೫–೮೭ರವರೆಗೆ ಲೋಕೋಪಯೋಗಿ ಇಲಾಖೆಯಿಂದ ಆ ಕಾಮಗಾರಿಯನ್ನು ಪೂರೈಸಲಿಕ್ಕಾಗಲಿಲ್ಲ. ಪುನಃ ಜಿಲ್ಲಾಪರಿಷತ್ತುಗಳು ಅಸ್ತಿತ್ವಕ್ಕೆ ಬಂದ ನಂತರ ೧೯೮೭ರಿಂದ ೧೯೯೧ರ ವರೆಗೂ ಆ ಕಾಮಗಾರಿಯನ್ನು ಪ್ರಾರಂಭಿಸಲೇ ಇಲ್ಲ. ಆದ್ದರಿಂದ ಈ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯವರೇ ನೇರವಾಗಿ ತೆಗೆದುಕೊಂಡು ಅದಕ್ಕೆ ಪ್ರತ್ಯೇಕವಾಗಿ ಹಣ ಒದಗಿಸಿ ಕೆಲಸ ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಕಾಮಗಾರಿ ಕೆಲಸ ಜಿಲ್ಲಾಪರಿಷತ್ತಿನ ವ್ಯಾಪ್ತಿಗೆ ಬರುತ್ತದೆ.

## ಕೊಪ್ಪದಲ್ಲಿ ನ್ಯಾಯಾಲಯ ಸ್ಥಾಪಿಸುವ ಬಗ್ಗೆ

೫೫೪ (೧೬೯೧) ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪ್ರತಿ ತಾಲ್ಲೂಕಿಗೆ ಒಂದು ನ್ಯಾಯಾಲಯ ಕೊಡಬೇಕೆಂಬ ಸರ್ಕಾರದ ನೀತಿಯಂತೆ ಚಿಕ್ಕಮಗಳೂರು ಜಿಲ್ಲಾ ಕೊಪ್ಪ ತಾಲ್ಲೂಕಿನಲ್ಲಿ ಕೋರ್ಟು ಪ್ರಾರಂಭಿಸುವ ಯೋಚನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ವಿಷಯವು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಆ) ಸರ್ಕಾರವು ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ದೊರೆಯುವ ಸಂಪನ್ಮೂಲಗಳಿಗೊಳಪಟ್ಟು ಪರಿಶೀಲಿಸುತ್ತದೆ.

ಶ್ರೀ ಯು. ಕೆ. ಶಾಮಣ್ಣ.—ಸನ್ಮಾನ್ಯ ಅಧ್ಯಕ್ಷರೇ, ನಮಗೆ ಬಂದಿರುವಂಥ ಉತ್ತರವನ್ನು ನೋಡಿದಾಗ, ಕೊಪ್ಪದಲ್ಲಿ ಕೋರ್ಟನ್ನು ಪ್ರಾರಂಭ ಮಾಡುವದಕ್ಕೆ ಬಹುಶಃ ಹೈಕೋರ್ಟ್‌ನಿಂದ ಸ್ಟೇ ಬಂದಿದೆಯೇನೋ ಎನ್ನುವ ರೀತಿಯಲ್ಲಿ ಇದೆ. ಅಂದರೆ ಹೈಕೋರ್ಟ್‌ನಿಂದ ಮಾಹಿತಿ ಬಂದ ಮೇಲೆ ಇದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವ ತರಹದಲ್ಲಿ ನನಗೆ ಉತ್ತರ ಕೊಟ್ಟಿದ್ದಾರೆ ಸುಮಾರು ೮–೧೦ ವರ್ಷಗಳಿಂದ ಇದನ್ನು ನಾವು ಕೇಳುತ್ತಿದ್ದೇವೆ. ಪ್ರತಿ ತಾಲ್ಲೂಕಿಗೂ ಬಂದು ಕೋರ್ಟ್ ಪ್ರಾರಂಭ ಮಾಡುವಂಥ ನೀತಿಯನ್ನು ಸರ್ಕಾರ ಹೊಂದಿರುವುದರಿಂದ ಆದಷ್ಟು ಬೇಗ ಹೈಕೋರ್ಟ್‌ನವರ ಮನವೊಲಿಸಿ ಶೀಘ್ರಗತಿಯಲ್ಲಿ ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದ ಪ್ರತಿ ತಾಲ್ಲೂಕಿನಲ್ಲೂ ಮುನ್ಸಿಫ್ ಕೋರ್ಟ್‌ಗಳನ್ನು ಸ್ಥಾಪನೆ ಮಾಡಬೇಕೆನ್ನುವುದು ಸಾರ್ವಕಾರದ ಸಾಮಾನ್ಯ ನೀತಿಯಾಗಿದೆ. ಆದರೆ, ಈ ಸಾಮಾನ್ಯ ನೀತಿಯು ಎರಡು ಷರತ್ತುಗಳಿಗೆ ಒಳಪಡುತ್ತದೆ. ೧) ಹೈಕೋರ್ಟ್ ಇದರ ಬಗ್ಗೆ ಶಿಫಾರಸ್ ಮಾಡಬೇಕಾಗುತ್ತದೆ. ಇಂಥಾ ಕಡೆ ನ್ಯಾಯಾಲಯವನ್ನು ಸ್ಥಾಪನೆ ಮಾಡಬೇಕಾದ ಅವಶ್ಯಕತೆ ಇದೆ ಎಂದು ಶಿಫಾರಸ್ ಮಾಡುವುದಲ್ಲದೆ ಆದರ ಜೊತೆಯಲ್ಲಿ ಆದ್ಯತೆ ಪಟ್ಟಿಯನ್ನು ಕಳುಹಿಸಿಕೊಡಬೇಕು. ಎರಡನೆಯದಾಗಿ, ಅವರು ಆದ್ಯತೆ ಪಟ್ಟಿ ಮತ್ತು ಮಂಜೂರಾತಿ ಪಟ್ಟಿಯನ್ನು ಕಳುಹಿಸಿದ ಮೇಲೆ ನಮ್ಮ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಮಂಜೂರು ಮಾಡುತ್ತೇವೆ. ಇದು ಇರತಕ್ಕಂಥ ವಾಸ್ತವ ಸ್ಥಿತಿ. ಕೊಪ್ಪದಲ್ಲಿ ಮುನ್ಸಿಫ್ ಕೋರ್ಟ್‌ನ್ನು ಸ್ಥಾಪನೆ ಮಾಡಲಿಕ್ಕೆ ಆಗುವುದಿಲ್ಲವೆಂದು ಉಚ್ಚ ನ್ಯಾಯಾಲಯ ಕಳಿಸಿಲ್ಲ. ಅದು ಇನ್ನೂ ಕೂಡ ಹೈಕೋರ್ಟಿನ ಪರಿಶೀಲನೆಯಲ್ಲಿದೆ ಅವರ ಶಿಫಾರಸ್ ಬಂದ ಮೇಲೆ ಸರ್ಕಾರ ಪರಿಗಣನೆಗೆ ತೆಗೆದು ಕೊಳ್ಳಬಹುದೇ ಹೊರತು ಅವರ ಶಿಫಾರಸ್ ಇಲ್ಲದೆ ಸರ್ಕಾರವೇ ಮಂಜೂರಾತಿ ಕೊಡುವುದಕ್ಕಾಗುವುದಿಲ್ಲ.

## ಹಾಸನ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಪ್ರಮುಖ ರಸ್ತೆಗಳನ್ನು ಮೇಲ್ದರ್ಜೆಗೆ ಪರಿವರ್ತಿಸುವುದು

೫೫೫ (೧೫೯೯) ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;—

ಅ) ಹಾಸನ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಪ್ರಮುಖ ರಸ್ತೆಯಾದ ಬಾಹ್ಯ ಕಾಶ ನಿಯಂತ್ರಣ ಕೇಂದ್ರ (ಎ.ಸಿ.ಎ.ಫ್.) ನಿಟ್ಟೂರು, ಬಾಗೇಶಪುರ, ಗಂಡಸಿ ಕೆಂಕೆರೆ ರಸ್ತೆಯನ್ನು ಜಿಲ್ಲಾ ಪರಿಷತ್‌ನಿಂದ ಮೇಲ್ದರ್ಜೆಗೆ ಪರಿವರ್ತಿಸುವ ಯೋಜನೆ ಅನುಷ್ಠಾನಕ್ಕೆ ಬಂದಿದೆಯೇ ?

ಆ) ಹಾಗಿಲ್ಲದ್ದರೆ ಅದು ಈಗ ಯಾವ ಹಂತದಲ್ಲಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಅನುಷ್ಠಾನಕ್ಕೆ ಬಂದಿರುವುದಿಲ್ಲ.

ಆ) ಈ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಬೇಕೆಂಬ ಪ್ರಸ್ತಾವನೆಯು ಸರ್ಕಾರಕ್ಕೆ ಇತ್ತೀಚೆಗೆ ಬಂದಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ

ಶ್ರೀ ಬಿ. ಶಿವರಾಮು.—ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಇದು ಸಹಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ, ನಾನು ಈ ವಿಚಾರವನ್ನು ಸರಕಾರದ ಗಮನಕ್ಕೆ ತಂದು ಆರು ತಿಂಗಳು ಆಗಿದೆ ನನ್ನ ಪ್ರಸ್ತಾವನೆ ಇಷ್ಟೆ, ನೀವು ರಚಿಸಿದ ಹೈಪರ್ ಕಮಿಟಿ ಯಾವಾಗ ಸೇರುತ್ತದೆ ? ಎರಡನೇಯದಾಗಿ ಜಿಲ್ಲಾಪರಿಷತ್ತಿನ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ರಸ್ತೆಗಳ ದರ್ಜೆಗೆ ಏರಿಸಬೇಕಾದರೆ